(ಇಂದು ದಿನಾಂಕ 12-01-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದ-**

ಕುಮಟಾ ನ್ಯಾಯಾಲಯದಲ್ಲಿ ನನಗೆ ಸಂಬಂಧಪಟ್ಟಂತೆ ಒಟ್ಟೂ 3 ಸಿವಿಲ್ ಪ್ರಕರಣಗಳು ಇವೆ. ಅಂಕೋಲಾ ನ್ಯಾಯಾಲಯದಲ್ಲಿ ನನಗೆ ಸಂಬಂಧಪಟ್ಟಂತೆ ಯಾವುದೇ ಪ್ರಕರಣ ಇರುವುದಿಲ್ಲ. ಪ್ರತಿವಾದಿಗಳು ಸ.ನಂ. 82/4 ರ ಸರ್ವೆ ಸಲ್ಲಿಸಲಾದ ಅರ್ಜಿಗೆ ನಾನು ತಕರಾರನ್ನು ಸಲ್ಲಿಸಿರುತ್ತೇನೆ. ನಾನು ತಕರಾರು ಸಲ್ಲಿಸಿದ ನಂತರ ಸಂಬಂಧಪಟ್ಟ ಪ್ರಾಧಿಕಾರದವರು ಸ್ವತ್ತಿನ ಬಳಿ ಭೇಟಿ ನೀಡಿರುವುದಿಲ್ಲ. ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಗಳು ಸರ್ವೆ ಕಾರ್ಯ ಮಾಡಿದಲ್ಲಿ ನನಗೆ ತೊಂದರೆ ಆಗುತ್ತದೆ.

ನಿ.ಪಿ.4 ರಲ್ಲಿ ಸ.ನಂ. 82/4 ರ ಪೂರ್ಣ ನಕಾಶೆ ಇದೆ ಎಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ಪ್ರತಿವಾದಿಗಳು ಪಾಗಾರವನ್ನು ಬಲವಂತದಿಂದ ಕಿತ್ತು ತೆಗೆದಿದ್ದಾರೆ

ಎಂದು ತಿಳಿಸಿದ್ದು, ಆ ಬಗ್ಗೆ ನ್ಯಾಯಾಲಯಕ್ಕೆ ಪೋಟೊವನ್ನು ಹಾಜರುಪಡಿಸಿರುವುದಿಲ್ಲ. ಪಾಗಾರವನ್ನು ಪ್ರತಿವಾದಿಗಳು ಕೀಳಲು ಬಂದಾಗ ನಾನು ದೂರು ನೀಡಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ